IJRESS Volume 4, Issue 8 (August 2014) (ISSN 2249-7382)
(IMPACT FACTOR – 4.992)

# JUNJAPPA - HISTORICAL ASPECTS IN CHITRADEVARU EPICS

**Dr. Chikkanna Yennekatte**
Dept., of Kannada, GFGC, Sira

## ಜುಂಜಪ್ಪ – ಚಿತ್ರದೇವರು ಕಾವ್ಯಗಳಲ್ಲಿಚಾರಿತ್ರಿಕ ಅಂಶಗಳು

**ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ**

ಜನಪದ ಜನಜೀವನದ ಅನುಭವದ ರೂಪ. ಜನರು ತಮ್ಮ ಬದುಕಿನ ಒಳಗೆ ಕಂಡುಕೊಂಡ ಅನುಭವದ ಸಂಗತಿಗಳನ್ನು ಮೌಖಿಕವಾಗಿ ರವಾನಿಸುವ ಜ್ಞಾನ ಪರಂಪರೆ ಇದು ಸಾಹಿತ್ಯ ರೂಪದಲ್ಲಿ ದಾಖಲಾಗಿ ಜನಪದ ಹಾಡು, ಜನಪದಕಥನ, ಮಹಾಕಾವ್ಯ, ಖಂಡಾವ್ಯ ಅಥವಾ ನೀಳ್ಗವಿತೆಯೂ ಇರಬಹುದು ಅದಕ್ಕೊಂದು ಖಚಿತವಾದ ಕಾರ್ಯಕಾರಣ ಸಂಬಂಧದೊಂದಿಗೆ ಈ ಬಗೆಯ ಸಾಹಿತ್ಯ ರೂಪಿತವಾಗುತ್ತದೆ. ಇದೇ ಮಾದರಿಯ ಕಥಾನಗಳು ಲಿಖಿತ ಪರಂಪರೆಯಲ್ಲಿಯೂ ಬಂದಿವೆ. ಆದರೂ ಮೌಖಿಕ ಪರಂಪರೆ ತನ್ನ ಕಣ್ಣಳತೆಯ ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳನ್ನು ಸರಳ, ನೇರ, ಖಚಿತ ಧ್ವನಿಯಲ್ಲಿ ಹೇಳಿಬಿಡುವುದು ಜನಪದರ ಜಾಯಮಾನ. ಹಾಗಾಗಿಯೇ ಜನಪದವನ್ನು ಜ್ಞಾನ ವಿಜ್ಞಾನ ಎಂತಲೂ, ಪಾರಂಪರಿಕ ಜ್ಞಾನ ಎಂತಲೂ ಅಥವಾ ನೆಲಮೂಲತನ ಎಂದೆಲ್ಲಾ ವ್ಯಾಖ್ಯಾನಿಸಲಾಗುತ್ತಿದೆ. ಜನಪದರಿಗೆ ತಮ್ಮ ನೆನಪಿನಾಳಗಳನ್ನು ಹಿಗ್ಗಲಿಸುವುದಕ್ಕಿಂತ ಅದನ್ನು ಹಾಗೆ ಹಾಗೆಯೇ ವರ್ಗಾಯಿಸುವ ತವಕ ಅಧಿಕ. ಹಾಗಾಗಿ ಊಹೆ, ತಿರುಚುವ ಅಥವಾ ಬಣ್ಣಕಟ್ಟಿ ವರ್ಣಿಸುವ ತುರ್ತುಗಿಂತ, ಸಹಜತೆ ಜನಪದರಿಗೆ ಪ್ರಿಯವಾಗುವ ಗುಣ ಈತನದಿಂದಾಗಿಯೇ ಪ್ರಾಚೀನತೆಯ ಬಹುಬಾಗದ ಜ್ಞಾನ ಶಾಖೆಗಳಲ್ಲೆವೂ ನಿಂತಿರುವುದು ಅಥವಾ ಸಂವಹನಗೊಳ್ಳುತ್ತಿರುವುದು ಈ ಮೌಖಿಕ ಪರಂಪರೆಯೇ ಎಂಬುದು ಗಮನಾರ್ಹ ಸಂಗತಿ. ನಮ್ಮ ಆದಿಕಾವ್ಯಗಳೂ ಪೂರ್ಣ ಮೂಲದವುಗಳಾಗಿ ಅವೆಲ್ಲವೂ ಜನಪದರ ಭಾವನೆಯ ಒಡೆದ ಚೂರುಗಳಾಗಿವೆ, ಎಂದು ವಿಲಿಯಂ ಪಾಟಕ್ ಅವರ ಹೇಳಿಕೆ ಹೆಚ್ಚು ಸಮಂಜಸವಾಗಿದೆ ಮಾತ್ರವಲ್ಲ ಪ್ರಪಂಚದ ಎಲ್ಲಾ ಸಂವಹನ ಸಾಹಿತ್ಯ ಮೊದಲಿಗೆ ಜನಪದ ಪರಂಪರೆಯಲ್ಲಿ ಪ್ರಕಟವಾಗಿ ನಂತರ ಅಕ್ಷರ ರೂಪ ಪಡೆದುಕೊಂಡಿದೆ ಎಂಬುದನ್ನು ರಾಮಾಯಣ ಮಹಾಭಾರತಗಳೂ ಮೂಲ ಜನಪದ ಪರಂಪರೆಯವು, ಎಂಬುದನ್ನು ಮರೆಯಬಾರದು.

ಜುಂಜಪ್ಪನ ನೆಲೆ ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಕಳುವರಹಳ್ಳಿ 'ರಾಯ ಕಳುವೋರಹಳ್ಳಿ' ಎಂದೇ ಪ್ರಕಟವಾಗುವ ಈ ಗ್ರಾಮ ಸಿರಾ ತಾಲ್ಲೂಕು ಕೇಂದ್ರಕ್ಕೆ ಪಶ್ಚಿಮಾಭಿಮುಖವಾಗಿ ಹದಿನಾರು ಕೀಲೋಮೀಟರಗಳ ದೂರದಲ್ಲಿದೆ. ಒಂದು ಕಾಲಕ್ಕೆ ಮಾತ್ರವಲ್ಲ ಇಂದಿಗೂ ಕುರುಚಲು ಗಿಡ, ಮರ, ಕಾಡು, ಮೇಡುಗಳ ಭೂಪ್ರದೇಶ. ಕಾಡುಗೊಲ್ಲರಿಗೆ ಅನ್ವರ್ಥವಾಗಿ ಹೊಂದಿಕೊಳ್ಳುವ ಕಾಡುಗೊಲ್ಲರ ಹಟ್ಟಿ ಸಮುದಾಯಗಳೇ ಈ ವ್ಯಾಪ್ತಿಯ ಪ್ರಧಾನ ನೆಲೆಗಳು. ಇಲ್ಲಿಂದ ಹೊರಟ ಕಾವ್ಯದ ದಿಕ್ಕು ಚಿತ್ರದುರ್ಗ, ಬಳ್ಳಾರಿ ಜಿಲ್ಲೆಯ ಸಂಡೂರು ಕಾವಲು, ಹೊಸದುರ್ಗದ ತಾಳ್ಯದ (ತಾಳೆದುರ್ಗಿ ವನ) ಗುಬ್ಬಿ ತಾಲ್ಲೂಕಿನ ಚೇಳೂರು

ವದಗದ ಗುಡ್ಡ (ಮಂಚನದೊರೆ) ಸಣಬನಹಳ್ಳಿ ಈ ಎಲ್ಲವೂ ವಲಸೆಗಾಮಿತನದ್ದು ಅನ್ನುವುದಕ್ಕಿಂತ ಪಶುಪಾಲನೆಯ ಹುಲ್ಲುಗಾವಲಿನ ನೆಲೆಗಳು ಇವುಗಳು ಭೂಮಾಲೀಕತ್ವದ ದರ್ಪ ದೌರ್ಜನ್ಯದ ಪ್ರತೀಕಾರವಾಗಿ ದುಷ್ಟರ ಶಿಕ್ಷೆ, ಶಿಷ್ಟರ ರಕ್ಷಣೆಯ ರೂಪವಾಗಿ ಪ್ರಕಟವಾಗುತ್ತವೆ. ಕೆಡಿಕಿಗೆ ಪ್ರತಿಯಾಗಿ ಶೌರ್ಯ, ಸಜ್ಜನಿಕೆಯಿಂದ ಅಹಂಕಾರವನ್ನು ಮೆಟ್ಟಿನಿಂತ ಬಗೆಯೂ ಇದಾಗಿದೆ. ಬೇಟೆಗಾರ ಸಂಸ್ಕೃತಿಯ ಆಕ್ರಮಣಕಾರಿ ಒಂದು ಬಗೆಯದಾಗಿದ್ದರೆ ಭೂಪರಿವರ್ತನೆಯ ಮೂಲಕ ಬೇಸಾಯಗಾರರ ಸಂಘಟನೆ, ಭೂಕೊಳ್ಳೆಬಾಕರ ನಗ್ರಹ ಈ ಎರಡರ ನಡುವಿನ ವರ್ಗ ಸಂಘರ್ಷ ಜುಂಜಪ್ಪನ ಕಥಾನಕದ ಮುಖ್ಯ ಆಶಯವಾಗಿದೆ. ಹಟ್ಟಿ ಸಂಸ್ಕೃತಿ ಅಸ್ತಿತ್ವಕ್ಕಾಗಿ ನಡೆಸಿದ ಹೋರಾಟವೂ ಜುಂಜಪ್ಪನ ಕಥೆಗೆ ವ್ಯಾಪಕತೆ ಲಭಿಸಿದೆ. ಈ ಹೋರಾಟ ಅನ್ಯ ಜನಾಂಗದ ವಿರೋಧಿ ಆಂದೋಲನವಾಗದೆ ಮಾರಗೋರ ಗೊಲ್ಲರು ಮತ್ತು ಕುಬೇರ ಗೊಲ್ಲರು ಇವರ ವಿಘಟನೆಯ ರೂಪ ಅಸಂಬಂದಿ ಮತ್ಸರ ಒಳಜಗಳ, ಕುಕುಲಗಳ ಒಳಗಿನ ಅಂತಃಕಲಹ ಅಭಿವೃದ್ಧಿ, ಸಂಪತ್ತಿಗೆ ಕುರುಬುವ ಕಕ್ಕಲಾತಿತನ, ದ್ವೇಷ, ಅಸೂಯೆ ಈ ಬಗೆಯ ಮರ್ಮಘಾತುಕತನಗಳು ಜುಂಜಪ್ಪನ ಕಥಾ ವಿಸ್ಥರಣೆಗೆ ಪ್ರೇರಕವಾಗಿರುವ ಅಂಶಗಳು ಈ ಎಲ್ಲವೂ ಕಾಡುಗೊಲ್ಲರ ನಂಬಿಕೆ ನಡಾವಳಿ ಆಚಾರಗಳ ಮೂರ್ತರೂಪವಾಗಿ ಜುಂಜಪ್ಪನ ಕಾವ್ಯದಲ್ಲಿ ಪ್ರಕಟವಾಗುತ್ತದೆ. ಸಾಮಾನ್ಯ ಬಿದಿರಿನ ದೊಣ್ಣೆ 'ಗಣೆ' ದೈವತ್ವ ಪಡೆದು ಭಕ್ತಿಗೌರವಗಳಿಗೆ ಪಾತ್ರವಾಗಿ ಪೂಜೆಗೆ ಒಳಗಾಗುವುದು, ಸಾಮಾನ್ಯ ಹೋರಿಕರ ಬಡಮೈಲ ಜುಂಜಪ್ಪನ ಬಸವನಾಗಿ ಅಸಾಧಾರಣ ಶಕ್ತಿ ಸಾಮರ್ಥ್ಯ ತೋರುವುದು ಇವೆಲ್ಲವೂ ಕಾಡುಗೊಲ್ಲರ ಸಂಸ್ಕೃತಿಯ ವಿಕಾಸದ ಭಾಗಗಳಾಗಿ ಪ್ರಕಟವಾಗುತ್ತದೆ.ಜುಂಜಪ್ಪನ ಕಾವ್ಯ ಕರ್ನಾಟಕದ ಮೌಖಿಕ ಪರಂಪರೆಯಲ್ಲಿ ಅತಿ ಧೀರ್ಘವು ವಿಸ್ತಾರವೂ ಆದ ಕಾವ್ಯ. ಇಲ್ಲಿ ಮೂರು ತಲೆಮಾರಿನ ಕಥನವಿದೆ ಮೊದಲನೆಯ ತಲೆಮಾರು ಜುಂಜಪ್ಪನ ಪೂರ್ವಿಕರ ಪರಂಪರೆ ಅಂದರೆ ತಾತಂದಿರದ್ದು ಇವರು ಈಗಿನ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಜರಿಮಲೆ ಸೀಮೆಯವರು.ಜರಿಮಲೆ ಕೂಡ್ಲಿಗಿ ಎಂಟು ಕಿ.ಮೀ ದೂರದಲ್ಲಿದೆ. ಇದರ ಆಸುಪಾಸಿನಲ್ಲಿ ಅಡವಿಸೂರನಹಳ್ಳಿ, ಹಯಕಲ್ಲು ಸೂಲದಹಳ್ಳಿ, ಹಿರೇಕುಂಬಳಗುಂಟೆ ಈ ಹಳ್ಳಿಗಳಿವೆ. ಇಲ್ಲೆಲ್ಲಾ ಕಾಡುಗೊಲ್ಲರು ಅಧಿಕವಾಗಿದ್ದಾರೆ ಜುಂಜಪ್ಪ, ಚಿತ್ರದೇವರ ದೇವಾಲಯಗಳಿವೆ. ಈ ಭೌಗೋಳಿಕ ವ್ಯಾಪ್ತಿ ಗುಡ್ಡ, ಗಿಡ, ಕುರುಚಲು ಕಾಡಿನ ಭಾಗವಾಗಿದ್ದು, ಹುಲ್ಲುಗಾವಲಿನ ಪ್ರದೇಶವಾಗಿದೆ. ಜುಂಜಪ್ಪನ ಪೂರ್ವಿಕರು ಪಶುಪಾಲಕರಾಗಿದ್ದು, ಹುಲ್ಲು ನೀರಿಗಾಗಿ ತುಮಕೂರು ಸೀಮೆಗೆ ವಲಸೆ ಬಂದಿರುವುದಾಗಿ ಕಾವ್ಯದ ಒಳಗೆ ವಿಸ್ತಾರದ ವಿವರಣೆಗಳಾಗಿವೆ, ಜುಂಜಪ್ಪನ ಮೊದಲ ತಲೆಮಾರಿನ ದೇವರಹಟ್ಟಿಯ ಬಕ್ಕದಲೆ ಚಿತ್ತಯ್ಯ, ಬರಿದಲೆ ಚಿತ್ತಯ್ಯ, ದಳವಾಯಿ ಚಿತ್ತಯ್ಯ, ಪೂಜಾರಿ ಚಿತ್ತಯ್ಯ, ದೊಡ್ಡಸಿನ್ನೇಗೌಡ, ಚಿಕ್ಕಚಿನ್ನೇಗೌಡ, ಚಿಕ್ಕೋನು ದೇವರ ದಯಮಾರ ಇವರು ಎರಡನೇ ತಲೆಮಾರು. ಜುಂಜಪ್ಪನ ತಾತ ದೇವರ ದಯಮಾರ ಅಜ್ಜಿ ಕಂಬಕ್ಕ, ಇವರಿಗೆ ಸಂಬಂಧಿಸಿದ ಕಥನವೂ ವಿಸ್ತರವಾಗಿ ಬಂದಿದೆ. ಇವರ ಮಗನೇ ಜುಂಜಪ್ಪನ ತಂದೆ ಇನ್ನು ಮೂರನೇ ತಲೆಮಾರು ಜುಂಜಪ್ಪನದ್ದು ಕೆಂಗುತಿ ಮಲ್ಲ ಆತನ ಮಡದಿ ಚಿನ್ನಮ್ಮ ಇವರಿಗೆ ಜುಂಜಪ್ಪ ಮಾರಣ್ಣ, ಮೈಲಣ್ಣ ಕೊನೆಯವಳು ಮಾರಕ್ಕ

ಇದಿಷ್ಟು ಜುಂಜಪ್ಪನ ವಂಶಾವಳಿಗಳೂ ಇವರು ಮಾರನೋರ ಗೊಲ್ಲರು ಇನ್ನು ಜುಂಜಪ್ಪನ ತಾಯಿಯ ಕಡೆಯವರು ಕಂಬೇರಗೊಲ್ಲರು ಇವರು ಸಿರಾ ತಾಲ್ಲೂಕು ಪೂರ್ವಕ್ಕೆ ಹದಿನೈದು ಕಿ.ಮೀ ದೂರದ ಕಂಬೇರಹಟ್ಟಿಯವರು ಇದು ಕಳುವೂರಹಳ್ಳಿಗೆ ಒಂದು ಕಿ.ಮೀ ದೂರದಲ್ಲಿದೆ. ದೊಡ್ಡಚಿನ್ನೇಗೌಡ, ಕರಿಚಿನ್ನ, ಮತಿಚಿನ್ನ, ಮಂಕರನಾಗಲ ಚಿನ್ನ, ಬಿಳಿಯಾಲ ಬೇವಿನ ಚಿನ್ನ, ಗಂಟುಕಾಲಿನ ಚಿನ್ನ ಕಡೆಯವನು ಕರಿನಾಗ ಇವರುಗಳೇ ಜುಂಜಪ್ಪನ ಸೋದರ ಮಾವಗಳು. ಜುಂಜಪ್ಪನ ಹುಟ್ಟಿನ ಬಗೆಗೂ ಪೌರಾಣಿಕ ಹಿನ್ನಲೆ ಇದೆ. ಪರಶಿವನ ಅರಮನೆ ದ್ವಾರಪಾಲಕರಾಗಿದ್ದ ಕಂಬೇರ ಗೊಲ್ಲರು ಶಿವಶರಣರು ಶಿವದರ್ಶನಕ್ಕೆ ಬಂದಾಗ ಕಾವಲುಗಾರರಾಗಿದ್ದ ಕಂಬೇರ ಗೊಲ್ಲರು ಅವಮಾನಿಸಿ ಕಳುಹಿಸುತ್ತಾರೆ. ಇದರಿಂದ ಕೆರಳಿದ ಶರಣರು ನೀವು ಮುಂದೆ ನರಪಿಶಾಚಿಗಳಾಗಿ ಹುಟ್ಟಿ ವೀರಭದ್ರನಿಂದ ಮರಣ ಹೊಂದಿ ಎಂದು ಶಾಪಕೊಡುತ್ತಾರೆ. ಈ ಶಾಪಗ್ರಸ್ಥರೇ ಕಂಬೇರ ಗೊಲ್ಲರು ಜುಂಜಪ್ಪ ವೀರಭದ್ರನ ಮತ್ತೊಂದು ಅವತಾರವಾಗಿ ಹುಟ್ಟುತ್ತಾನೆ ಜುಂಜಪ್ಪ ಏಳು ಹಸುವಿನ ಕರುಗಳಿಂದ ಏಳುಲಕ್ಷ ದನಗಳ ಒಡೆಕಾರನಾಗಿ, ಪಶುಪಾಲನಾಗಿ ಇರುವುದನ್ನು ಸಹಿಸದೆ ಆತನ ಮೇಲೆ ನಾನಾ ಬಗೆಯ ಹಿಂಸೆ, ಸತ್ವ ಪರೀಕ್ಷೆಗೆ ಒಳಪಡಿಸಿ ಕೊನೆ ದಂಬೇರ ಗೊಲ್ಲರ ಈ ಏಳು ಜನ ಸೋದರರೆಲ್ಲರೂ ನಾಶವಾಗುತ್ತಾರೆ. ಸ್ವತಹ ಶಿವನೇ ಜುಂಜಪ್ಪನನ್ನು ಸತ್ವ ಪರೀಕ್ಷಗೆ ಒಳಪಡಿಸಿ ಆತನ ಗೋವಿನ ಪ್ರೀತಿ, ಸತ್ಯ ನಿಷ್ಟೆಗಳನ್ನು ಬಗೆಬಗೆಯಲ್ಲಿ ಕಾಟ ಕೊಡುವ ಮೂಲಕ ತನ್ನ ಸೋದರ ಮಾವಂದಿರೇ ದ್ವೇಷ, ಅಸೂಯೆ, ಹಗೆತನದಿಂದ ಹದಿನಾರು ವರ್ಷಗಳ ಕಾಲ ಜುಂಜಪ್ಪನನ್ನು ಕಾಡುವ ಕಾರ್ಯಕಾರಣ ಸಂಬಂಧಗಳನ್ನು ಜುಂಜಪ್ಪನ ಕಾವ್ಯ ವಿವರಿಸುತ್ತಾ ಹೋಗುತ್ತದೆ. ಘಟನೆಗಳು ಸಂಧುಗಳಾಗಿ ಬಿಚ್ಚಿಕೊಳ್ಳುತ್ತವೆ. ಜುಂಜಪ್ಪ ದುಷ್ಟ ನಿಗ್ರಹ, ಶಿಷ್ಟಾಲನೆಯ ಸಂದರ್ಭಗಳಲ್ಲಿ ಪವಾಡಗಳ ಮೂಲಕ ಒಂದು ಪೌರಾಣಿಕ ಚೌಕಟ್ಟನ್ನು ಪಡೆದುಕೊಳ್ಳುತ್ತಾನೆ. ಪವಾಡಗಳು ವಿಜೃಂಭಿಸುತ್ತವೆ ಚೇಳೂರು ರಂಗಣ್ಣನೊಂದಿಗೆ ರಾಯ ಪಗಡೆ, ಸಿರಾ ಪಾಳೆಯಗಾರ ರಂಗಪ್ಪನಾಯಕನೊಂದಿಗೆ ಯುದ್ಧ, ಸೊಂಡೂರು ಹುಲ್ಲುಗಾವಲಿನ ಕಾಳಗ, ತಾಳ್ಯದ ತಾಳಿಲ ದುರ್ಗಿಯೊಂದಿಗಿನ ಕದನ, ಇವುಗಳ ಜೊತೆಜೊತೆಗೆ ಪ್ರಕಟವಾಗುವ ಗೌರಸಂದ್ರ, ವೇಣುಕಲ್ಲುಗುಡ್ಡ, ಪುರಲೆಹಳ್ಳಿ, ಸಾಣಿಕೆರೆ, ಹುಲಿಕುಂಟೆ ಮತ್ತೊಡುಕಾವಲು, ಜರಿ ಮಲೆ, ಕಳುವರಹಳ್ಳಿ, ಕಂಬೇರಹಟ್ಟಿ, ಚೇಳೂರು, ಮರಡಿಗುಡ್ಡ, ಪರಸಕ್ಕನಕೆರೆ, ಮಂಚಲದೊರೆ, ಮದಗದಗುಡ್ಡ, ಚಿಕ್ಕಸಂದ್ರದಕಾವಲು, ರಂಗನಹಳ್ಳಿ, ಹೊನ್ನೇನಹಳ್ಳಿ, ಕುರಿಹಳ್ಳ, ಬೇರಸಂದ್ರ, ಹುಲಿಕುಂಟೆ ಬೈಲುಲು, ಪಟ್ಟನಾಯಕನಹಳ್ಳಿ ಏಣ, ಮದ್ದಕ್ಕನಹಳ್ಳಿ, ಬಂಡೆ ಸರಹದ್ದು, ಜವನಗೊಂಡನಹಳ್ಳಿ ಕಾಡು, ಕರಿಯಾಲದ ಬಯಲು, ಹರ್ತಿಕೋಟೆ ಏರೆ, ಕಗ್ಗಲಡು, ಗೌಡಗೆರೆ ದಿಣ್ಣೆ ಈ ಮೊದಲಾದ ಚಾರಿತ್ರಿಕ ಗ್ರಾಮಗಳ ವಿವರಣೆ ಈ ಕಾವ್ಯಕ್ಕೆ ಚಾರಿತ್ರಿಕ ಆಯಾಮವನ್ನು ನೀಡುತ್ತವೆ ಮಾತ್ರವಲ್ಲ ಸಿರಾದ ಪಾಳೆಯಗಾರ ರಂಗಪ್ಪನಾಯಕ ಮೊದಲು ಜುಂಜಪ್ಪನನ್ನು ಅವಮಾನಿಸಿ, ಕೊನೆಗೆ ಜುಂಜಪ್ಪನಿಗೆ ಶರಣಾಗಿ, ಆತನ ಕೋಲುಮಗನಾಗಿ ಕೋಲುಕಾರ ಸೇವೆ ಮಾಡುವ ಈ ಮೂಲಕ ಗ್ರಾಮ ಸಂಸ್ಕೃತಿಯ ಒಂಬತ್ತು ಕೈವಾಡದವರಲ್ಲಿ ಕೋಲುಕಾರ ಸೇವೆ ಮಾಡುವ ಈ ಮೂಲಕ ಗ್ರಾಮ ಸಂಸ್ಕೃತಿಯ ಒಂಬತ್ತು

ಕೈವಾಡದವರಲ್ಲಿ 'ಕೋಲುಕಾರನ' ಪಾತ್ರ ಮಹತ್ವದ್ದಾಗಿರುತ್ತದೆ. ಸಿರಾದ ಪಾಳೆಯಗಾರ ರಂಗಪ್ಪನಾಯಕ ಜುಂಜಪ್ಪನಿಗೆ ಕೋಲುಕಾರ ಸೇವೆ ಮಾಡುವ ಮೂಲಕ ಕೋಲುಕಾರ ವೃತ್ತಿಯ ಪಾರಂಪರಿಕ ನಿಯಮಾವಳಿಯ ಆರಂಭಿಕ ಎಂಬ ಚಾರಿತ್ರಿಕ ದಾಖಲೆಗಳೂ ಈ ಕಾವ್ಯದಲ್ಲಿ ಪ್ರಕಟವಾಗುತ್ತವೆ. ಇದರ ಜೊತೆಜೊತೆಗೆ ಜುಂಜಪ್ಪ ಒಬ್ಬ ಸಮರ್ಥ ಚಾರಿತ್ರಿಕ ವ್ಯಕ್ತಿಯಾಗಿದ್ದು, ಆತನು ತನ್ನ ಶೀಲ ಶೌಚಗಳ ಶ್ರೇಷ್ಠ ನಡಾವಳಿಯಿಂದ ದೈವತ್ವಕ್ಕೇರಿ ಕಾಡುಗೊಲ್ಲ ಜನಾಂಗದ ಸಾಂಸ್ಕೃತಿಕ ನಾಯಕನಾದವನು ಎಂಬ ಗ್ರಹಿಕೆಗೂ ಸಾಕಷ್ಟು ಚಾರಿತ್ರಿಕ ಪುರಾವೆಗಳು ಇಲ್ಲಿ ಲಭ್ಯವಿದೆ. ಹಾಗಾಗಿಸಿರಾದ ಪಾಳೆಯಗಾರ ರಂಗಪ್ಪನಾಯಕನ ಕಾಲ 1580, ನಂತರ ಇಮ್ಮಡಿ ರಂಗಪ್ಪನಾಯಕ 1612, ಮುಮ್ಮಡಿ ರಂಗಪ್ಪನಾಯಕ 1626 ಎಂದು ತಿಳಿದು ಬರುತ್ತದೆ. ಜುಂಜಪ್ಪ ಕಾಲವೂ ಇದೇ ತೇದಿಯಾಗಿದ್ದು, ಜುಂಜಪ್ಪ ಕ್ರಿ.ಶ. 1500 ರಿಂದ 1625 ಈ ಕಾಲಘಟ್ಟದಲ್ಲಿ ಸಿರಾ ಸೀಮೆಯಲ್ಲಿ ಬದುಕಿದ್ದ ಒಬ್ಬ ಸಾಂಸ್ಕೃತಿಕ ನಾಯಕ ಎಂಬುದು ಈ ಕಾವ್ಯದಿಂದ ಖಚಿತವಾಗುತ್ತದೆ ಈ ಬಗೆಗೆ ಯಾವುದೇ ಶಾಸನಗಳ ಉಲ್ಲೇಖವಾಗಲಿ, ಮಧ್ಯಾಕಾಲಿನ ಕನ್ನಡ ಗ್ರಂಥಗಳ ಉಲ್ಲೇಖವಾಗಲಿ ಪಾಳೆಯಗಾರ ಚರಿತ್ರೆಗಳ ಉಲ್ಲೇಖವಾಗಲಿ ಬರುವುದಿಲ್ಲ. ಕಾಡುಗೊಲ್ಲರ ಸಂಸ್ಕೃಯಲ್ಲಿ ಈರಗಾರರಿಗೆ, ಈರಗಾರ್ತಿಯರಿಗೆ ಇವರು ಹುಯ್ಯಿಸಿರುವ ಅಲಗು, ಕಲ್ಲುಗಳೇ ಇವರ ವೀರಗಲ್ಲು-ಮಾಸ್ತಿಕಲ್ಲುಗಳಾಗಿವೆ. ಇವುಗಳ ಆರಾಧನೆಯೇ ಕಾಡುಗೊಲ್ಲರಿಗೆ ಪರಮ ಪವಿತ್ರ. ಗುಡ್ಡೆಗೆ ಹಾಲುಯ್ಯುವುದು, ಹಿರಿಯರ ಗುಡ್ಡೆ, ಹಾಲುತುಪ್ಪದ ಹಬ್ಬವಾಗಿ ಭಕ್ತಿ ಸಡಗರದಿಂದ ನಡೆದುಕೊಳ್ಳುವುದು ಕಾಡುಗೊಲ್ಲರ ನಡಾವಳಿಯಾಗಿದೆ.

## ಭಾಗ-2

ಚಿತ್ರದೇವರ ಕಾವ್ಯ ಕಾಡುಗೊಲ್ಲರ ಪ್ರಾಚೀನ ಸಂಸ್ಕೃತಿಯ ಒಂದು ಹಳೆಯ ಮಾದರಿ, ಚಿತ್ತಯ್ಯ ಪುರಾಣ ಪುರುಷ ಸ್ವಯಂ ಪರಶಿವ ಎಂದೇ ಭಾವಿಸುವ ಆರಾಧಿಸುವ ಮೂಲಕ ಕಾಡುಗೊಲ್ಲರು ದ್ರಾವಿಡ ಸಂಸ್ಕೃತಿಯ ಶಿವ ಸಂಪ್ರದಾಯಕ್ಕೆ ಒಂದು ಪ್ರಮುಖ ಆಕರ, ಒಳಪ್ರಂಗಡಗಳಾದ, ಕಟ್ಟಮನೆ, ಗೌಡಾಳಿಕೆ ಈ ಬಗೆಯ ವೈವಿಧ್ಯಮಯ ಕುಲಾಚಾರ, ನಂಬಿಕೆ ನಡಾವಳಿಯ ನಡುವೆಯೂ ಕಾಡುಗೊಲ್ಲರೆಲ್ಲರೂ ಆರಾಧಿಸುವುದು ಚಿತ್ರದೇವರನ್ನು. ಹಾಗಾಗಿಯೇ ಚಿತ್ರದೇವರ ಹಟ್ಟಿಗಳು ಚಿತ್ರದುರ್ಗ, ತುಮಕೂರು, ಬಳ್ಳಾರಿ ಸಿಮೇಗಳಲ್ಲಿ ರಚನೆಯಾಗಿವೆ. ಕಾಡುಗೊಲ್ಲರ ಮನಗಳಲ್ಲಿ ಹುಟ್ಟುವ ಮಕ್ಕಳಿಗೆ ಚಿತ್ತಯ್ಯ ಎಂಬ ಹೆಸರನ್ನು ಕನಿಷ್ಟ ಒಬ್ಬರಿಗಾದರೂ ಇಡುವ ಸಂಪ್ರದಾಯವಿದೆ. ಚಿತ್ತಯ್ಯ, ದೊಡ್ಡಚಿತ್ತ, ಸಣ್ಣಚಿತ್ತ ಹೀಗೆ ಚಿತ್ತಯ್ಯನ ಪರಂಪರೆ ಕಾಡುಗೊಲ್ಲರ ನಂಬಿಕೆ ನಡಾವಳಿಗಳಲ್ಲಿ ನಿರಂತರವಾಗಿ ಪ್ರಕಟವಾಗುತ್ತದೆ. ಹೀಗೆ ಶೈವ ಸಂಪ್ರದಾಯದ ಕಾಡುಗೊಲ್ಲರು ವೈಷ್ಣವರಾಗಿ ಕಾಲಾನಂತರ ಪರಿವರ್ತನೆಯಾದರು ಎಂಬುದಕ್ಕೆ 'ಕಂಬದರಂಗ' ಎಂಬ ಈ ಕಾವ್ಯ ಖಚಿತವಾಗಿ ವಿವರಿಸುತ್ತದೆ. (ಗಮನಿಸಿ ಮಾಗೋಡು ಕಂಬದ ರಂಗನಾಥನ ಕಾವ್ಯ ಸಂಪಾದಕರು ಡಾ. ಚಿಕ್ಕಣ್ಣ ಯಣ್ಣೆಕಟ್ಟೆ 2001)

ಚಿತ್ರದೇವರ ಕಾವ್ಯವನ್ನು ತುಮಕೂರು, ಚಿತ್ರದುರ್ಗ, ಬಳ್ಳಾರಿ ಈ ಭೌಗೋಳಿಕ ಪರಿಸರದ ಕಾಡುಗೊಲ್ಲರ ಹಟ್ಟಿಗಳಲ್ಲಿ ವ್ಯಾಪಕವಾಗಿ ಹಾಡುತ್ತಾರೆ.ಈ ಕಾವ್ಯ ಕೂಡ ಜುಂಜಪ್ಪನ ಕಾವ್ಯದಂತೆ ಕಾಡುಗೊಲ್ಲರ ಸಂಸ್ಕೃತಿಯನ್ನು ಅನಾವರಣಗೊಳಸುತ್ತಾ ಕಾವ್ಯ ಬೆಳೆಯುತ್ತದೆ.ಚಿತ್ರದೇವರ ಕಾವ್ಯದ ಕೇಂದ್ರ ಚಿತ್ರಗಿರಿ. ಇದು ಇಂದಿನ ಚಿತ್ರದುರ್ಗ ಇದಕ್ಕೆ ಹೊಂದಿಕೊಂಡಂತೆ ಆಗ್ನೇಯದಲ್ಲಿ ನಿಡುಗಲ್ಲು ದುರ್ಗ, ಪೂರ್ವದಲ್ಲಿ ಬೆಸ್ತರಪಳ್ಳಿ. ಈ ಬೆಸ್ತರಪಳ್ಳಿ ಇಂದಿನ ಅನಂತಪುರ ಜಿಲ್ಲೆಯ ಕಲ್ಯಾಣದುರ್ಗ ತಾಲ್ಲೂಕಿನ ಕಾಡುಗೊಲ್ಲರ ಪ್ರಧಾನ ನೆಲೆ. ಇದು ಪಾವಗಡ ತಾಲ್ಲೂಕು ಯಲ್ಲಪ್ಪನಾಯಕನ ಕೋಟೆಗೆ ಏಳು ಕಿ.ಮೀ ದೂರದಲ್ಲಿದೆ. ಇಲ್ಲಿ ಚಿತ್ತಯ್ಯನ ಮಡದಿ ಮಾಳಮ್ಮನ ಸಮಾದಿ ಇದೆ. ಹೊರಾಂಗಣದಲ್ಲಿ ಚಿತ್ರದೇವರ ಗುಡಿ ಇದ್ದು ದೀಪಾವಳಿಯಲ್ಲಿ ಬೃಹತ್ ಜಾತ್ರೆ, ಹಾಲು ಹಬ್ಬದ ಹೆಸರಿನಲ್ಲಿ ಜರುಗುತ್ತದೆ. ತಿರುಮಣಿ ಇದು ಪಾವಗಡದ ಪೂರ್ವಕ್ಕೆ ಇಪ್ಪತ್ತೈದು ಕಿ,ಮಿ ದೂರದಲ್ಲಿದೆ. ಕರ್ನಾಟಕಾಂಧ್ರದ ಗಡಿನೆಲ ಸುಪ್ರಸಿದ್ಧ ಪುಣ್ಯಕ್ಷೇತ್ರ ನಾಗಲಮಡಿಕೆಗೆ ಹತ್ತು ಕಿ.ಮೀ ದೂರದಲ್ಲಿದೆ ಈ ತಿರುಮಣಿ, ಚಿತ್ರದೇವರ ಗೊಡಗು ಅಂದೆ ಬಂಗಾರದ ಕೊಡೆಯನ್ನು ಅಪಹರಿಸಿದ, ಕಳ್ಳಕೂರಮರ ಗ್ರಾಮ, ಇದರ ವಿವರಣೆಯೂ ಕಾವ್ಯದಲ್ಲಿ ವಿಸ್ತಾರವಾಗಿ ಬಂದಿದೆ.

ಕಾವ್ಯ ಆರಂಭವಾಗುವುದು ಗೋವರ್ಧನ ಗಿರಿಯ ಪ್ರಸ್ತಾವನೆಯೊಂದಿಗೆ. ಶಿವ ಪಾರ್ವತಿಯವರು ನಂದಿಯ ಮೇಲೆ ಕುಳಿತು ಲೋಕಸಂಚಾರ ಮಾಡುವಾಗ ಗೋವರ್ಧನ ಗಿರಿಗೆ ಬೆಂಕಿ ಬಿದ್ದು ಆದರಲ್ಲಿನ ಸಕಲ ಜೀವರಾಶಿಗಳಲ್ಲೆವೂ ಕಾರ್ ಕಾರ್ ಎಂದು ಗೋಳಿಡುವಾಗ, ಶಿವ ಗಳಗಳನೆ ಬೆದರಿ ತನ್ನ ಬೆವರಿನಿಂದ ತೊಯ್ದ ಬಟ್ಟೆಯನ್ನು ಗೋವರ್ಧನ ಗಿರಿಯ ಮೇಲೆ ಅಂದರೆ ಬೆಂಕಿಯ ಮೇಲೆ ಹಿಂಡಿದಾಗ ಆ ಬೆವರಿನಲ್ಲಿ ಹುಟ್ಟಿದವನೆ ಚಿತ್ತಯ್ಯ ಹಾಗಾಗಿ ಗೋವರ್ಧನ ಗಿರಿಯ ಪ್ರಸ್ತಾವನೆ ಕಾವ್ಯದಲ್ಲಿ ವಿಸ್ತಾರವಾಗಿ ಪ್ರಕಟವಾಗಿದೆ. ಈ ಗೋವರ್ಧನಗಿರಿ ಎನ್ನುವುದು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲ್ಲೂಕಿನ ಗೋವಿಂದವಾಡ ಎಂದು ಗುರುತಿಸಲಾಗಿದೆ. ಚಿತ್ತಯ್ಯನು ವೇದಾವತಿ ನದಿಯನ್ನು ದಾಟಿ ಆಂಧ್ರದ ಅನಂತಪುರ ಜುಲ್ಲೆಯ ಅಮರಾಪುರ ಮಂಡಲ ವ್ಯಾಪ್ತಿಯ ಮದ್ದನಕುಂಟೆಯಲ್ಲಿ ನೆಲೆಸಿದನೆಂದೂ ಹೇಳಲಾಗುತ್ತಿದೆ. ಮದ್ದನ ಕುಂಟೆಯ ಹೊರವಲಯದಲ್ಲಿ ಚಿತ್ರದೇವರ ಬೃಹತ್ ದೇವಾಲಯವಿದ್ದು, ಕಾಡುಗೊಲ್ಲರು ಈ ದೇವರನ್ನು ತಮ್ಮ ಮನೆದೇವರನ್ನಾಗಿಸಿಕೊಂಡು ಇಂದಿಗೂ ಆರಾಧಿಸುತ್ತಾ ಬರುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಚಿತ್ತಯ್ಯನನ್ನು ಬಸವಾದಿ ಶಿವಶರಣರ ಸಮಕ್ಕಿಟ್ಟು ನೋಡುವ ಚಾರಿತ್ರಿಕ ಸಂಗತಿಗಳೂ ಚಿತ್ರದೇವರ ಕಾವ್ಯದಲ್ಲಿ ಪ್ರಕಟವಾಗುತ್ತಿವೆ. ಕೂಡಲ ಸಂಗಮ, ಸಂಗಮೇಶ, ಕುಣಿಕಲ್ಯಾಣಿ ಬಸವಣ್ಣ ಈ ಬಗೆಯ ಉಲ್ಲೇಖಗಳನ್ನು ಗಮನಿಸಿದರೆ ಚಿತ್ರದೇವರು, ಚಿತ್ತಯ್ಯ ಎಂಬ ಚಾರಿತ್ರಿಕ ವ್ಯಕ್ತಿಯೇ ಆಗಿದ್ದು ಹನ್ನೆರಡನೇ ಶತಮಾನದಲ್ಲಿ ಇದ್ದಿರಬಹುದಾದ ಸಾಧ್ಯತೆಯೂ ಇದೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಸಮೀಪದಲ್ಲಿ ಚಿತ್ರಹಳ್ಳಿ ಎಂಬ ಗ್ರಾಮವಿದ್ದು, ಅಲ್ಲಿ ಚಿತ್ರದೇವರ ಪುರಾತನ ದೇವಾಲಯವಿದೆ. ಚಿತ್ರದೇವರು ಬೊಮ್ಮಣ್ಣನ ಮಗಳು ಮಾಳವ್ವನನ್ನು ಲಗ್ನವಾಗುತ್ತಾನೆ. ಈತ ಬ್ರಾಹ್ಮಣ ಜನಾಂಗದವರು ಎಂದು ಕಾವ್ಯದಲ್ಲಿದೆ. ಆದರೆ ಈ ಬೊಮ್ಮಣ್ಣ ಬೇರೆ ಯಾರೂ ಆಗಿರದೆ ಕ್ರಿ.ಶ.

1297ರಲ್ಲಿ ನಿಡಗಲ್ಲು ಸಂಸ್ಥಾನವನ್ನು ಆಳಿದ ಚಿಕ್ಕವೀರ ಬೊಮ್ಮಣ್ಣ, ದೊಡ್ಡವೀರಬೊಮ್ಮಣ್ಣ, ಚಿಕ್ಕವೀರಬಮ್ಮನಾಯಕ, ಬೊಮ್ಮಲಿಂಗ ಈ ಹೆಸರುಗಳು ನಿಡಗಲ್ಲು ಅರಸು ಪರಂಪರೆಯಲ್ಲಿ ಕಂಡುಬರುತ್ತವೆ. ಆದುದರಿಂದ ಚಿತ್ರದೇವರು ಚಿತ್ತಯ್ಯ ಎಂಬ ಚಾರಿತ್ರಿಕ ವ್ಯಕ್ತಿಯಾಗಿದ್ದು ಈತನು 1297ರ ಸುಮಾರಿಗೆ ಅಥವಾ ಹನ್ನೆರಡನೇ ಶತಮಾನದಲ್ಲಿ ಬಾಳಿದ ಚಾರಿತ್ರಿಕ ವ್ಯಕ್ತಿಯಾಗಿದ್ದು ಈತನು ನಿಡಗಲ್ಲು ಅರಸರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದ್ದರು. ಈತನ ಮಡದಿ 'ಮಾಳವ್ವ' ನಿಡಗಲ್ಲು ಸಂಸ್ಥಾನದ ಬೊಮ್ಮಣ್ಣನ ಮಗಳು ಎಂಬುದು ಕಾವ್ಯದೊಳಗೆ ಪ್ರಕಟವಾಗುವ ಮಾಹಿತಿಗಳಿಂದ ತಿಳಿದುಬರುತ್ತದೆ. ಇದೆಲ್ಲದರ ಜೊತೆಗೆ ಚಿತ್ತಯ್ಯ ಎಂಬ ವ್ಯಕ್ತಿ 'ಮಾರ್ಗರೆ' ಎಂಬಲ್ಲಿ ಒಂದು ಕೆರೆಯನ್ನು ಕಟ್ಟಿಸಿರುವುದರ ಉಲ್ಲೇಖವಿದೆ. ಈ ಕೆರೆಯ ದುರಸ್ಥಿಗೆ ಹೆಂಜೇರುವಿನ ನೊಳಂಬಾದಿರಾಜ ಅಯ್ಯಪ್ಪ ದೇವನು ಈ ಕೆರೆಯ ದುರಸ್ಥಿಗಾಗಿ ದಾನಗಳನ್ನು ಮಂಜೂರು ಮಾಡಿದ ಸಂಗತಿಯೂ ಇದೇ ಕಾಲದ ಶಾಸನಗಳಲ್ಲಿಯೂ ಪ್ರಕಟವಾಗಿದೆ. ಹೀಗೆ ಮೌಖಿಕ ಕಾವ್ಯ ಜನಪದರ ಭಾವನೆಯ ರೂಪವಾಗಿ ಬೆಳೆದರೂ ಕಾವ್ಯದ ನಾಯಕ ಹಾಗೂ ಆತನ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದ ವಿವರಗಳನ್ನು ಕಟ್ಟಿಕೊಡುವ ಸ್ಥಳನಾಮಗಳು, ವ್ಯಕ್ತಿ ನಾಮಗಳು ಇವುಗಳಿಗೆ ಪೂರಕವಾಗಿ ಇಂದಿಗೂ ಐತಿಹ್ಯಗಳಾಗಿ ಸ್ಮಾರಕ, ಗುಡಿ, ಗೋಪುರಗಳ ಮಾದರಿಯಲ್ಲಿರುವ ದಾಖಲುಗಳು ಆಕಾರಗಲನ್ನು ಗಮನಿಸಿದಾಗ ಜನಪದ ಕಾವ್ಯಗಳು ಚಾರಿತ್ರಿಕ ಸಾಂಸ್ಕೃತಿಕ ನಾಯಕರುಗಳ ಕಾಲಘಟ್ಟದ ಗ್ರಹಿಕೆಗೆ, ಈ ಮೂಲಕ ಒಂದು ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡಲು ಮಹತ್ವದ ಆಕರಗಳಾಗುತ್ತವೆ. ಈ ಹಿನ್ನಲೆಯಲ್ಲಿ ಮಧ್ಯಕರ್ನಾಟಕದ ಬುಡಕಟ್ಟು ಕಾವ್ಯಗಳಾದ ಜುಂಜಪ್ಪ, ಚಿತ್ರದೇವರು, ಮೈಲಾರಲಿಂಗ, ಕಂಬದರಂಗ, ಗಾದರಿ ಪಾಲನಾಯಕ, ಕುಮಾರರಾಮ, ಎತ್ತಪ್ಪ, ಈ ಬಗೆಯ ಜನಪದ ಕಾವ್ಯ ಪರಂಪರೆ ಕರ್ನಾಟಕ ಸಾಂಸ್ಕೃತಿಕ ಚಾರಿತ್ರಿಕ ಲೋಕಕ್ಕೆ ಮಹತ್ವದ ಮೌಖಿಕ ಆಕರಗಳಾಗಿ ದಾಖಲು ಸಾಹಿತ್ಯಕ್ಕೆ ಬಹುದೊಡ್ಡ ಸಾಂಸ್ಕೃತಿಕ ಮಾಹಿತಿಗಳಾಗಿವೆ,

**ಆಕಾರಗಳು**

1. ವೀರಜುಂಜಪ್ಪ ಸಮಗ್ರ ಕಥಾವಳಿ, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಗಡಿನಾಡ ಜಾನಪದ ಸಂಪರ್ಕ ಕೇಂದ್ರ, ಕಾಳಿದಾಸನಗರ, ಸಿರಾ 2011.
2. ಜುಂಜಪ್ಪ ಮಹಾಕಾವ್ಯ, ಡಾ. ತೀ.ನಂ.ಶಂಕರನಾರಾಯಣ, ಡಾ. ಎಂ.ಎನ್. ವೆಂಕಟೇಶ್ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೋಡಿ 2014.
3. ಗಡಿನಾಡ ಜಾನಪದ ಸಂಸ್ಕೃತಿ ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಗಡಿನಾಡ ಜಾನಪದ ಸಂಪರ್ಕ ಕೇಂದ್ರ, ಕಾಳೀದಾಸನಗರ, ಸಿರಾ 2010